ವೈದ್ಯಾಧಿಕಾರಿಗಳ ಹುದ್ದೆ ಕಳೆದ ಒಂದು ವರ್ಷದಿಂದಲೂ ಖಾಲಿ ಇದ್ದು, ತತ್ಪರಿಣಾಮವಾಗಿ ಈ ಸರಹದ್ದಿನ ಗ್ರಾಮೀಣ ಜನತೆ ವೈದ್ಯಕೀಯ ಸೌಲಭ್ಯಗಳಿಲ್ಲದೆ ತೊಂದರೆ ಈಡಾಗಿದ್ದಾರೆ. ಔಷಧಿಗಳೂ ಕೂಡ ಸರಿಯಾಗಿ ಸರಬರಾಜು ಮಾಡುತ್ತಿಲ್ಲ. ಈ ಬಗ್ಗೆ ಸರ್ಕಾರ ತೀವ್ರ ಗಮನ ಹರಿಸಿ ಆ ಹುದ್ದೆಗಳನ್ನು ಭರ್ತಿ ಮಾಡಬೇಕು. ಮತ್ತು ಗ್ರಾಮಾಂತರ ಪ್ರದೇಶದ ಜನತೆಯ ಆರೋಗ್ಯದ ವಿಚಾರದಲ್ಲಿ ಅತಿ ಅಗತ್ಯವಾದ ಈ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಆರೋಗ್ಯ ಸಚಿವರು ರೈಲ್ವೆ ಅಪಘಾತವಾದ ಸ್ಥಳಕ್ಕೆ ಹೋಗಿದ್ದಾರೆ. ನಂತರ ನಿಮಗೆ ಉತ್ತರ ತರಿಸಿಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

**5. ಉತ್ತರ ಕನ್ನಡ ಜಿಲ್ಲೆಯ ಕಾರವಾರ ಸಮೀಪ ಕೈಗಾ ಅಣು ಸ್ಥಾವರದ ಕೆಲಸ ಸ್ಥಗಿತಗೊಳಿಸಲು ಒತ್ತಾಯ**

ಶ್ರೀ ವಿಶ್ವೇಶ್ವರ ಹೆಗಡೆ (ಕಾರವಾರ) : ಮಾನ್ಯ ಅಧ್ಯಕ್ಷರೆ, ನಿನ್ನೆ ವಿದ್ಯುತ್ ಸಚಿವರು ಮಾತನಾಡುತ್ತಿದ್ದಾಗ ಉತ್ತರ ಕನ್ನಡಕ್ಕೆ ಶಾಕ್ ಕೊಡುತ್ತಾರೆಂದು ತಿಳಿದುಕೊಂಡಿದ್ದೆ. ಬೇಡ್ತಿ ಹಾಗೂ ಅಗನಾಶಿನಿ ಯೋಜನೆಯನ್ನು ಮಾಡುವುದಿಲ್ಲ ಎಂದು ಹೇಳಿ ಹೊಸ ಧೈರ್ಯವನ್ನು ಕೊಟ್ಟಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರ ಸಮೀಪ 'ಕೈಗಾ' ಅಣು ಸ್ಥಾವರದ ಕೆಲಸ ನಡೆಯುತ್ತಿರುವುದನ್ನು ತಕ್ಷಣದಲ್ಲಿ ನಿಲ್ಲಿಸಬೇಕು. ಸುಪ್ರೀಂ ಕೋರ್ಟಿನ ಪುನರ್ ಪರಿಶೀಲನೆಯ ಆದೇಶ ಇದ್ದಾಗಲೂ ವೈಜ್ಞಾನಿಕವಾಗಿ ಈ ಸ್ಥಳದ ಆಯ್ಕೆಯಲ್ಲಿ ದೋಷವಿದೆ ಎಂದು ತಜ್ಞರ ವರದಿ ಇದ್ದಾಗೂ ಕೆಲಸ ನಡೆದಿರುವುದು ಮತ್ತು ಕೆಲವು ತಿಂಗಳ ಹಿಂದೆ ಕಳಪ ಕಾಮಗಾರಿಯಿಂದ ಕೈಗಾದ ಕಟ್ಟಡ ಕುಸಿದು ಬಿದ್ದಾಗ ತಜ್ಞರ ಸಮಿತಿಗಳಾದ ಎನ್.ಪಿ.ಸಿ. ಹಾಗೂ ಎ.ಇ.ಆರ್.ಬಿ. ಗಳ ವರದಿಗಳು ಇನ್ನೂ ಬರದೆ ಇದ್ದಾಗ ಅಲ್ಲಿ ಕೆಲಸಗಳು ಮುಂದುವರಿದಿರುವುದನ್ನು ತಕ್ಷಣದಲ್ಲಿ ನಿಲ್ಲಿಸಬೇಕು. ಮತ್ತು ಕೈಗಾದಿಂದ ಶಿರಸಿಯ ತನಕ ವಿದ್ಯುತ್ ಲೈನ್ ಎಳೆಯಲು ನಡೆಸಿದ ಸರ್ವೆ ಮತ್ತು ಇತರೆ ಕಾಮಗಾರಿ ಕೆಲಸಗಳನ್ನು ತಕ್ಷಣದಲ್ಲಿ ನಿಲ್ಲಿಸಬೇಕು. ಹಾಗೂ ಪರಿಸರದ ರಕ್ಷಣೆಯ ಕೆಲಸಕ್ಕೆ ರಾಜ್ಯ ಸರ್ಕಾರ ಮುಂದಾಗಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಉಪ ಮುಖ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೆ, ಕೈಗಾ ಅಣು ವಿದ್ಯುತ್ ಸ್ಥಾವರ ಈಗಾಗಲೇ ಅರ್ಧಕ್ಕಿಂತ ಹೆಚ್ಚು ಕೆಲಸವಾಗಿದೆ. ಸುಮಾರು 800-900 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನು ಒಂದೂವರೆ ವರ್ಷದೊಳಗೆ ಮೊದಲನೆಯ ರಿಯಾಕ್ಟರನ್ನು ನಾವು ಪ್ರಾರಂಭಿಸತಕ್ಕ ಯೋಜನೆಯಿದೆ. ಉತ್ತರ ಕನ್ನಡ ಜಿಲ್ಲೆಯ ಪರಿಸರ ವಾದಿಗಳು ಈ ಬಗ್ಗೆ ಸಾಕಷ್ಟು ಅತೃಪ್ತಿ ವ್ಯಕ್ತಮಾಡಿದ್ದಾರೆ. ಅವರೊಡನೆ ಸಮಾಲೋಚನೆ ಮಾಡಿ ಕೆಲಸವನ್ನು ಮುಂದುವರಿಸಿದ್ದಾರೆ. ಮಾನ್ಯ ಸದಸ್ಯರು ಈಗೇನು ಸುಪ್ರೀಂ ಕೋರ್ಟ್ ಆರ್ಡರನ್ನು ಹೇಳುತ್ತಿದ್ದಾರೆ ಈ ಆರ್ಡರನ್ನು ನಾವು ನೋಡಿದ್ದೇವೆ. ಅವರು ಪುನರ್ ಪರಿಶೀಲನೆ ಮಾಡುವುದಕ್ಕೆ ಯೋಗ್ಯವಿದೆಯೆಂದು ಪುನರ್ ಪರಿಶೀಲನೆ ಮಾಡಿ ಮುಂದುವರಿಸುತ್ತಾ ಇದ್ದೇವೆ. ಮಾನ್ಯ ಸದಸ್ಯರೊಡನೆ ನಾನು ಚರ್ಚೆ ಮಾಡಿದ್ದೇನೆ. ಆದರೆ ಲೈನ್ ಎಳೆಯುವುದನ್ನು ನಿಲ್ಲಿಸಬೇಕೆಂದು ಹೇಳಿದ್ದಾರೆ. ಅವರು ಹೇಳುವ ಹಾಗೆ ಕೈಗಾ ಯೋಜನೆಯನ್ನು ಕೈ ಬಿಡುವುದು ಇದ್ದರೆ ಲೈನ್ ಎಳೆಯುವ ಅವಶ್ಯಕತೆ ಇರಲಿಲ್ಲ. ಕೈಗಾ ಯೋಜನೆಯನ್ನು ಕೈಬಿಡತಕ್ಕ ವಿಚಾರ ಸರ್ಕಾರದಲ್ಲಿಲ್ಲ. ಅವರು ಕೇಳತಕ್ಕ ಕೆಲಸವನ್ನು ನಿಲ್ಲಿಸತಕ್ಕ ಅವಶ್ಯಕತೆಯಿಲ್ಲ.